289

ಹಾಸನ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 17ನೇ ಮಾರ್ಚ್ 1896.

ಇದರಿಂದ ಪ್ರಕಟಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟ್ ಅರೇಕೆರೆ ಫಾರೆಸ್ಟ್ಸ್ ಡಿವೋದಲ್ಲಿ ಜಮೋಯಿಸಲ್ಪಟ್ಟಿರುವ ಸುಮಾರು (25) ಸಾವಿರ ಮಣುಗಳ ಅಳಲೇಕಾಯಿಯನ್ನು ದರ ಸಾವಿರ ಮಣಗಳಿಗೆ ಒಂದೊಂದು ಲಾಟುಗಾ ಮಾಡಿ ಹಾಸನ ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕ್ವಸರ್‌ವೇಟರವರ ರೂಬರೂ ಬರುವ ಏಪ್ರಿಲ್ ಮಾಹೆ 10ನೇ ತಾರೀಖು ಶುಕ್ರವಾರ ದಿವಿ 11 ಘಂಟೆ ಲಾಗಾಯತು ಹರಾಜು ಮಾಡಿಸುತ್ತಾ ದ್ದರಿಂದ ಇಚ್ಛೆವುಳ್ಳವರು ಆ ಕಾಲಕ್ಕೆ ಹಾಜರಾಗಿ ಛಡದರಖಾಸ್ತು ಮಾಡಬಹುದಾಗಿರುತ್ತೆ.

ಹರಾಜಿನ ರೂಲ್ಸನ್ನು ಆ ಕಾಲದಲ್ಲಿ ಓದಿ ಹೇಳಲಾದೀತು ಏಜ್ಡ್ ರೂಲ್ಸ್ ಪ್ರಕಾರವೇ ಮೇಲ್ಕಂಡ ಹರಾಜು ನಡಿಸಲ್ಪಡುವದು

ಎಸ್. ಎ. ಬಾವೂರಾವ್,
ಫಾರೆಸ್ಟ್ ಅಸಿಸ್ಟೆಂಟ್ ಕ್ವಸರ್‌ವೇಟರ್.

ಇ ಸ್ತಿ ಹಾ ರ್ ನಾ ಮೆ.

ತಾರೀಖು 24ನೇ ಮಾರ್ಚಿ ಸ್ಯ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೇಲೂರು ತಾಲ್ಲೂಕು ದೊಡ್ಡಬಿಕ್ಕೋಡು ಗ್ರಾಮದಲ್ಲಿ ಇರುವ ಇದರಡಿ ನಮೂದು ಮಾಡಿರುವ ಜಮಿನಿಗೆ ಕಾಫೀ ಸಾಗುವಳಿಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ಯ 1896ನೇ ಇಸವಿ ಮೇ ತಾರೀಖು 18ನೇ ಸೋಮವಾರ ಹಗಲು 11 ಘಂಟೆಗೆ ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ ಮುಂಜಾರಾತಿಗೆ ವಳಪಡಿಸಿ ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರವರ ರೂಬರೂ ಬೇಲೂರು ಮೊಕ್ತಿಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಆಸ್ಸೆಟ್‌ಪೈಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಛಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮ್ಮಿ ಹರಾಜನ್ನು ಖೈದ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮ್ಮಿ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರುಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಆಸ್ಸೆಟ್‌ಪೈಸ್) ಶೈಕಿಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಕೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮಿನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾಕಾದರೂ ಪಡದರೆ ದರಖಾಸ್ತುದಾರನ ಷುರೂ ತೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಸ್ಸೆಟ್‌ಪೈಸ್‌ಯಾನೆ ನಿಭುಮವಾದ ಸರಕಾರಿ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಕೇಕಡಾ 25 ರೂಪಾಯಿಗಳ ಮೇರೆ ಆಗುವ ತೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಛಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತವಯಕ್ಕೆ ಮುಂಚೆಯೇ ಆಖೈರ್ ಛಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಛಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಖರ್ಚು ಜಾತಾ ಉಳಿಯುವ ಡಿಪಾಜಿಟ್ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ತೆಗದುಕೊಂಡು ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮ್ಮಿ ಪುನಃ ಹರಾಜ್ ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು. ದುಸರೇ ಹರಾಜಿನಲ್ಲಿ ಉತ್ಪತ್ತಿಯಾಗುವ ಮೊದಲು ಹರಾಜಿನ ಸವಾಲ್‌ಗಿಂತಾ ಕಮ್ಮಿಯಾಗುವ ಪಕ್ಷ ಕಮ್ಮಿ ಮೊಬಲಗನ್ನು ರೆವಿನ್ಯೂ ಬಾಕಿಯಂತೆ ಅವನಿಂದ ವಸೂಲ್ ಮಾಡಲ್ಪಡುತ್ತೆ.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮಿನನ್ನು ಷುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು, 4ನೇ 5ನೇ ಸಾಲ್ ಅರ್ಧ ಆಕಾರ, 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮಿನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟುವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮಿನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

6. ಈ ನಂಬರಿನಲ್ಲಿರುವ ಸುಮಾರು 1—2 ವಿಸ್ತೀರ್ಣದ ಯರಡು ದಾರಿಗಳು ಇವೆ, ಇವುಗಳನ್ನ ಹರಾಜಿನಲ್ಲಿ ಪಡಿಯುವ ಛಡದರಖಾಸ್ತುದಾರನು ಅಡ್ಡಿಪಡಿಸಕೂಡದು. ಅವುಗಳನ್ನ ಜನೋಪಯುಕ್ತಕ್ಕಾಗಿ ಉಳಿಸಿಕೊಂಡಿದೆ.